# ಕುಂಚ ಪ್ರಪಂಚ





**ರಶ್ಮಿ ಎ. ಪಾಟೀಲ್**
7ನೇ ತರಗತಿ,
ಮಾತಾಶ್ರೀ
ಬಸಲಿಂಗಮ್ಮ ಸ್ಕೂಲ್,
ಕುಂದರಗಿ, ಬೀಳಗಿ





**ಪ್ರಣೀತ್ ರಾವ್ ಕೆ.**
5ನೇ ತರಗತಿ, ಹಿರಿಯ
ಪ್ರಾಥಮಿಕ ಶಾಲೆ,
ಅಮ್ಟೂರು ಕೆದ್ದ,
ಬಂಟ್ವಾಳ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in

# ಟ್ರಂಕು

**ನರಸಿಂಹಾರೆಡ್ಡಿ ಯಂಕಾಮೋಳ**
ಕಲೆ: ಸಂತೋಷ್ ಸಸಿಹಿತ್ಲು

ಅಟ್ಟದ ಮೇಲಿನ
ಹಳೆಯ ಟ್ರಂಕು
ಬಾಲ್ಯದ ನೆನಪಿಗೆ
ಚೆಲ್ಲಿತು ಬೆಳಕು

ಅಜ್ಜಿಯ ಕಾಡಿಸಿ
ಇಳಿಸಿದೆವು ಕೆಳಗೆ
ಧೂಳನು ಜಾಡಿಸಿ
ತೆರೆದೆವು ಒಳಗೆ

ಕಪ್ಪು ಬಿಳುಪಿನ
ಹಲವು ಚಿತ್ರಗಳು
ಹರಿದು ಹೋಗದ
ಹಳೆಯ ದಾಖಲೆಗಳು

ಅಪ್ಪನ ಬಾಲ್ಯದ
ಚಿತ್ರವ ನೋಡಿ
ಪುಟ್ಟನು ನಕ್ಕನು
ಅಕ್ಕನಿಗೆ ಹೇಳಿ

ಆಗಿನ ಕಾಲದ
ಬದುಕಿನ ಮೆಲುಕು
ಅಜ್ಜಿಗೆ ನೆನಪಿಸಿ
ಹೇಳಿಸಿತು ಟ್ರಂಕು

